ಸಾಧ್ಯವಾದಷ್ಟು ತಮ್ಮ ಸಂಪತ್ತು ಮತ್ತು ಅಮೂಲ್ಯವಾದ ವಸ್ತುಗಳನ್ನು ತೆಗೆದುಕೊಂಡು ನದಿಯ ಕಡೆಗೆ ಓಡಿದರು. ಆದರೆ, ನದಿಯನ್ನು ಮುಟ್ಟುವುದು ಎಷ್ಟು ಕಷ್ಟವಾಗಿತ್ತು!

ಅಲ್ಲಿ ಬಂದರು ಇರಲಿಲ್ಲ. ದೈತ್ಯಾಕಾರದ ಜೊಂಡು ಬಿಟ್ಟು ಬೇರೇನೂ ಇರಲಿಲ್ಲ. ಮರ ಮುಟ್ಟುಗಳಿಂದ ತುಂಬಿದ ಸೌಕಾಂಗಣವಿದ್ದಲ್ಲಿ ಪೈನ ಗಿಡಗಳ ಅರಣ್ಯವಿತ್ತು. ಬಂದರು ಹಾವುಗಳಿಂದ ತುಂಬಿ ಹೋಗಿತ್ತು. ನೌಕೆಗಳು ಹೊಸ ಹಸಿರು ನಡುಗಡ್ಡೆಗಳಂತೆ ಕಾಣುತ್ತಿದ್ದವು. ಅದೃಷ್ಟವಶಾತ್ ಅಲ್ಲಿ ಶಸ್ತ್ರಾಸ್ತ್ರಸಹಿತ ಯುದ್ಧ ನೌಕೆಗಳಿದ್ದವು. ಜನಜಂಗುಳಿ ಅಲ್ಲಿ ಆಶ್ರಯ ಪಡೆಯಿತು. ಅಲ್ಲಿಂದ ಜನ ಹಳೆಯ ಅರಣ್ಯ ಹೊಸದರೊಂದಿಗೆ ಯಶ್ವಸಿಯಾಗಿ ವಿಲೀನವಾಗುತ್ತಿರುವುದನ್ನು ಕಂಡರು. ಸಾವಕಾಶವಾಗಿ ಗಿಡಗಳು ತಮ್ಮ ನೆತ್ತಿಗಳನ್ನು ಕೂಡಿಸಿಕೊಂಡವು ಮತ್ತು ಸೂರ್ಯ ಪ್ರಕಾಶ ತುಂಬಿದ ನೀಲಾಕಾಶದ ಕೆಳಗೆ, ದೂರದ ಕ್ಷಿತಿಜದವರೆಗೆ ಬೃಹತ್ ಗಾತ್ರದ ಸಸ್ಯ ಸಂಪತ್ತು ನದಿಯವರೆಗೆ ಹರಡಿತು. ನಗರದ ಛಾವಣಿಗಳ, ಗೋಡೆಗಳ ಯಾವುದೇ ಕುರುಹು ಉಳಿಯಲಿಲ್ಲ. ಆಗೀಗ ಕುಸಿದು ಬೀಳುವ ಧಡ್ ಎಂಬ ಶಬ್ದ ವಿನಾಶದ ಕೊನೆಯ ಪ್ರತಿಧ್ವನಿ, ಸಿಟ್ಟಿಗೆದ್ದ ಅಸಹಾಯಕ ಮರಕಡಿಯುವವನ ಕೊಡಲಿಯ ಸದ್ದು ಸಸ್ಯ ಸಂಪತ್ತಿನ ಆಳದಿಂದ ಕೇಳಿ ಬರುತ್ತಿತ್ತು. ಅನಂತರ ಅಲ್ಲಿ ಚೈತನ್ಯಭರಿತ ಮೌನ, ಗುಂಯ್‌ಗುಡುತ್ತಿರುವ ಚಿಟ್ಟೆಗಳ ಹಿಂಡು ಖಾಲಿ ಮಾಡಿ ಹೋದ ನದಿಯ ಸುತ್ತ ಪರಿಭ್ರಮಿಸುತ್ತಿರುವುದು ಬಿಟ್ಟು ಬೇರೆನಿರಲಿಲ್ಲ ಮತ್ತು ಅಲ್ಲಿ ಸಮುದ್ರದ ಹತ್ತಿರ, ಪಲಾಯನಗೈದ ಹಡಗು, ಮೂರು ದೊಡ್ಡ ಮರಗಳು, ಹಾಯಿಗಳ ಮಧ್ಯೆ ಬೆಳೆದ ಅರಣ್ಯ ನಗರಿಯ ಕೊನೆಯ ವಲಸಿಗರನ್ನು ಸಾಗಿಸುತ್ತಿರುವುದು ಕಾಣಿಸುತ್ತಿತ್ತು.

---

**ಅಲ್ಫಾನ್ಸ್ ದೊದೆ** (Alphonse Daudet 1840–1897)

19ನೇ ಶತಮಾನದ ಜನಪ್ರಿಯ ಸಣ್ಣ ಕತೆಗಾರ. ಅವರ ಪ್ರಸಿದ್ಧ ಕಥಾಸಂಕಲನಗಳಲ್ಲಿ ಒಂದಾದ Letters from My Mill (1868) ಒಂದು ರಮ್ಯ ಹಾಗೂ ಅದ್ಭುತ ಲೋಕವನ್ನೇ ಸೃಷ್ಟಿಸಿದೆ. ಮೇಲ್ನೋಟಕ್ಕೆ ಈ ಲೇಖಕನ ಕಥೆಗಳು ಸರಳವೆನಿಸಿದರೂ, ಕಥನ ಶೈಲಿ ಓದುಗನಲ್ಲಿ ಆಳವಾದ ಪರಿಣಾಮವನ್ನು ಉಂಟುಮಾಡುತ್ತದೆ.

ದೊದೆ ಒಬ್ಬ ವಾಸ್ತವವಾದಿ ಬರಹಗಾರ. ಕ್ರೌರ್ಯ ಮತ್ತು ಸಿನಿಕತೆಯ ಚಿತ್ರಣ ಅವರ ಕತೆಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಸರಳತೆ ಹಾಗೂ ಸಂಯಮದಿಂದ ದುಃಖವನ್ನು ಚಿತ್ರಿಸುವ ರೀತಿ ಮತ್ತು ಸೂಕ್ಷ್ಮತೆಗಳು ಅವರ ಕತೆಗಳ ಪ್ರಮುಖ ಲಕ್ಷಣಗಳು. 'ಅರಣ್ಯನಗರಿ' ದೋದೆಯವರ Wood's Town ಕತೆಯ ಅನುವಾದ. ಇದನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದು ಬೆಳಗಾವಿಯ ಸುಷ್ಮಾ ಪಾಟಣೇಕರ್.

**ನಾಗರತ್ನಾ ವಿ. ಪರಾಂಡೆ**

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕಿ. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಸ್ನಾತಕೋತ್ತರ ಪದವಿಗಳೊಂದಿಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. 'ಮಾಡರ್ನ್ ಇಂಗ್ಲಿಷ್ ಗ್ರಾಮರ್ ಅಂಡ್ ಯುಸೇಜ್', 'ಎ ರೇನ್ಬೋ ಬ್ರಿಡ್ಜ್' ಮತ್ತು 'ಗ್ಲೋಬಲೈಜೇಶನ್ ಅಂಡ್ ಲಿಟರೇಚರ್' ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ವೇಣುಗೋಪಾಲ ಅಭಿನಂದನ' ಕೃತಿಯ ಸಹಸಂಪಾದಕಿ. ಕೆಲವು ಫ್ರೆಂಚ್ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.